International Journal of Kannada Research
www.kannadajournal.com

ISSN: 2454–5813
IJKR 2024; 10(1): 29-33
© 2024 IJKR
www.kannadajournal.com
Received: 02-12-2023
Accepted: 06-01-2024

**ಡಾ. ಆನಂದಕುಮಾರ ಎಂ ಜಕ್ಕಣ್ಣವರ**
ಸಹಾಯಕ ಪ್ರಾಧ್ಯಾಪಕರು, ಎಸ್‌ಎಂಎಟಿ'ನ, ಶಿವಾನಂದ ಮಹಾವಿದ್ಯಾಲಯ ಕಾಗವಾಡ, ಬೆಳಗಾವಿ, ಕರ್ನಾಟಕ, ಭಾರತ

**Corresponding Author:**
**ಡಾ. ಆನಂದಕುಮಾರ ಎಂ ಜಕ್ಕಣ್ಣವರ**
ಸಹಾಯಕ ಪ್ರಾಧ್ಯಾಪಕರು, ಎಸ್‌ಎಂಎಟಿ'ನ, ಶಿವಾನಂದ ಮಹಾವಿದ್ಯಾಲಯ ಕಾಗವಾಡ, ಬೆಳಗಾವಿ, ಕರ್ನಾಟಕ, ಭಾರತ

# ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ದಾಸಸಾಹಿತ್ಯದ ಕೊಡುಗೆ

**ಡಾ. ಆನಂದಕುಮಾರ ಎಂ ಜಕ್ಕಣ್ಣವರ**

**ಪೀಠಿಕೆ**

ಜ್ಞಾನ, ಭಕ್ತಿ ಹಾಗೂ ಕರ್ಮ ಮಾರ್ಗಗಳ ಮೂಲಕ ಪರಮಸತ್ಯವನ್ನು ಶೋಧಿಸುವಲ್ಲಿ ಮತ್ತು ಸತ್ಯದ ಸಾಕ್ಷಾತ್ಕಾರಕ್ಕಾಗಿ ಪ್ರತಿ ಯುಗದಲ್ಲಿ ಒಂದೊಂದು ತೆರನಾದ ಭಕ್ತಿ ಪರಂಪರೆಗಳು ಕಂಡುಬರುತ್ತವೆ. ಅಂಥ ಭಕ್ತಿ ಪರಂಪರೆಯಲ್ಲಿ ಕರ್ನಾಟಕದಲ್ಲಿ ವೀರಶೈವ ವಚನಸಾಹಿತ್ಯ ಮತ್ತು ಹರಿದಾಸರ ಕೀರ್ತನ ಸಾಹಿತ್ಯ ಬಹುಮುಖ್ಯವಾಗಿದೆ. ಹರಿದಾಸರು ಶ್ರೀಹರಿಯನ್ನು ಆರಾಧ್ಯ ದೈವವನ್ನಾಗಿಸಿಕೊಂಡು ಆತನ ಸ್ತುತಿಯೊಂದಿಗೆ ಸಮಾಜಕ್ಕೆ ಬೋಧನಪರವಾದ ಕೀರ್ತನ, ಸುಳಾದಿ, ಉಗಾಭೋಗಗಳನ್ನು ರಚಿಸಿದರು. ವಚನಕಾರರಂತೆ ಆತ್ಮಸಾಕ್ಷಾತ್ಕಾರದ ನೀತಿ ಬೋಧಕಗಳನ್ನು ಹರಿದಾಸರಲ್ಲಿ ಕಾಣುತ್ತೇವೆ. ಕನ್ನಡ ಸಾಹಿತ್ಯಕ್ಕೆ ದಾಸ ಸಾಹಿತ್ಯವು ಅಮೋಘವಾದ ಕೊಡುಗೆಯನ್ನು ನೀಡಿದೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ದಾಸ ಸಾಹಿತ್ಯ ನೀಡಿದ ಕೊಡುಗೆಯನ್ನು ಚರ್ಚಿಸಲಾಗಿದೆ.

**ದಾಸ ಸಾಹಿತ್ಯದ ಆರಂಭ**

ಕ್ರಿ.ಶ. ೧೨ನೇ ಶತಮಾನದಿಂದ ೧೪ನೇ ಶತಮಾನದ ಕಾಲಘಟ್ಟ ಭಕ್ತಿ ಪರಂಪರೆಯ ಅತ್ಯುನ್ನತವಾದ ಕಾಲವಾಗಿದೆ. ಬಸವಣ್ಣನವರು, ರಾಮಾನುಜರು, ಮಧ್ವಾಚಾರ್ಯರು, ತಮ್ಮ ಸಿದ್ಧಾಂತ ನಿಲುವುಗಳ ಮೂಲಕ ಭಕ್ತಿಯ ಮಹೋನ್ನತ ನೆಲೆಯನ್ನು ಕಂಡವರಾಗಿದ್ದಾರೆ. ಮಧ್ವಾಚಾರ್ಯರು, ರಾಮಾನುಜಾರ್ಯರು ಮೂಲ ತತ್ವಕ್ಕೆ ತಮ್ಮದೇಯಾದ ವ್ಯಾಖ್ಯಾನ ಮಾಡಿದರು. ಆ ಮೂಲಕ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಪರ್ಯಾವಾಗಿ ದ್ವೈತ್ ಸಿದ್ಧಾಂತವನ್ನು ಪ್ರಚುರಪಡಿಸಿದರು. ಹಾಗಾಗಿ ಕನಾಟಕದ ಹರಿದಾಸ ಪರಂಪರೆಯಲ್ಲಿ ಮಧ್ವಾಚಾರ್ಯರು ಮೂಲಪುರುಷರಾಗಿದ್ದಾರೆ. ಮಧ್ವಾಚಾರ್ಯರು ತಮ್ಮ ಸಿದ್ಧಾಂತದ ತಾತ್ವಿಕ ನಿಲುವನ್ನು ತಮ್ಮ ಸ್ವರೂಪವನ್ನು ಕೂಲಂಕಷವಾಗಿ ಚರ್ಚಿಸಿ ನಿರೂಪಿಸಿದ್ದಾರೆ. ಇದೇ ಕಾರ್ಯವು ಮುಂದೆ ಅನೇಕ ಹರಿದಾಸರಿಂದ ಮುಂದುವರಿಯಲ್ಪಡುತ್ತದೆ. ಶಿವಶರಣರಂತೆ ಹರಿದಾಸರು ಅನುಭಾವ ಮತ್ತು ಭಕ್ತಿ ಪ್ರಧಾನ ಸಾಹಿತ್ಯವನ್ನು ವಿಪುಲವಾಗಿ ನಿರ್ಮಿಸಿದರು.

ಭಕ್ತನು ಭಗವಂತನಲ್ಲಿ ಇಟ್ಟಿರುವ ಅನನ್ಯ ಪ್ರೀತಿಯೇ ಭಕ್ತಿ. ಮುಕ್ತಿಯನ್ನು ಬದುಕಿನ ಅಂತಿಮ ಗುರಿಯೆಂದು ನಂಬಿದ ಸನಾತನ ಪರಂಪರೆ, ಭಕ್ತಿಮಾರ್ಗದ ಜೊತೆಗೆ ಜ್ಞಾನ ಹಾಗೂ ಕರ್ಮ ಮಾರ್ಗಗಳನ್ನು ಕಂಡುಕೊಂಡಿತು. ಇವುಗಳಲ್ಲಿ ಭಕ್ತಿ ಮಾರ್ಗ ಹೆಚ್ಚು ಜನಪ್ರಿಯವಾಯಿತು. ಸಾಧನಗಳ ಸುಲಭತೆ, ತಿಳಿಯಾದ ನಿರೂಪಣೆ, ಹೃದಯ ವೈಶಾಲ್ಯ ಈ ಮಾರ್ಗದ ಜನಪ್ರಿಯತೆಗೆ ಕಾರಣಗಳಾದವು. ಭಕ್ತಿ ಮಾರ್ಗದ ಒಂದು ಪ್ರಮುಖ ಎಳೆಯಾಗಿ ದಾಸ ಸಾಹಿತ್ಯ ಹುಟ್ಟಿಕೊಂಡಿತು. ಕನ್ನಡ ಸಾಹಿತ್ಯದ ಸುದೀರ್ಘ ಇತಿಹಾಸದಲ್ಲಿ ಅದು ಮಹತ್ವದ ಸ್ಥಾನ ಪಡೆದಿದೆ. ಸುಮಾರು ಐದು ಶತಮಾನಗಳ ವ್ಯಾಪ್ತಿಯ ಈ ಭಕ್ತಿ ಸಾಹಿತ್ಯವನ್ನು ಹಲವು ಹರಿದಾಸರು ಪೋಷಿಸಿದರು. ನರಹರಿತೀರ್ಥ ಮೊದಲಗೊಂಡು ಶ್ರೀಪಾದರಾಯ, ವಾದಿರಾಜ, ವ್ಯಾಸರಾಯ, ಪುರಂದರದಾಸ ಮತ್ತು ಕನಕದಾಸರ ತರುವಾಯ ವಿಜಯದಾಸ ಗೋಪಾಲದಾಸ, ಜಗನ್ನಾಥದಾಸ, ಪ್ರಸನ್ನವೆಂಕಟದಾಸ, ಮಹಿಪತಿದಾಸ, ಕೃಷ್ಣದಾಸ ಮುಂತಾದ ಹರಿದಾಸರು ಆ ಪರಂಪರೆಯನ್ನು ಮುಂದುವರೆಸಿದರು.

**ದಾಸಸಾಹಿತ್ಯದ ಕೊಡುಗೆ**

ದಾಸ ಸಾಹಿತ್ಯವನ್ನು ‘ಹಿಂದೆ ಸಾಹಿತ್ಯವೆಂದು ಎಣಿಸುತ್ತಿರಲಿಲ್ಲವೆಂದು ತೋರುತ್ತದೆ. ದಾಸರು ಕವಿಗಳ ಜೊತೆಗೆ ತಾವೂ ಕವಿಗಳೆಂದು ಹೇಳಿಕೊಳ್ಳದೇ ಇದ್ದುದು ಇದರ ಮುಖ್ಯ ಕಾರಣವಾಗಿರಬೇಕು’[೧] ಆದರೆ ದಾಸರು ಈ ಬಗ್ಗೆ ಚಿಂತಿಸಿದವರಲ್ಲ. ‘ಸರ್ವೋತ್ತಮನ ಸ್ತುತಿಸಲಿಕ್ಕೆ ಸರಿಬೆಸದಕ್ಷರದೆಣಿಕ್ಯಾಕೆ, ಯತಿ ಛಲ ಗಣ ಪ್ರಾಸವ್ಯಾಕೆ’ ಎಂದು ಕಾಖಂಡಕಿ ಮಹಿಪತಿ ದಾಸರು ಕೇಳಿದ್ದಾರೆ. ೧೨ನೆಯ ಶತಮಾನದ ಬಸವಣ್ಣನವರು ಇದೇ ರೀತಿಯಲ್ಲಿ ‘ತಾಳಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ, ಅಮೃತಗಣ ದೇವಗಣವನರಿಯೆ, ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ’ ಎಂದರು. ಶರಣರು, ದಾಸರೆಲ್ಲ ಸಾಹಿತಿಗೆ ಅವಶ್ಯಕವಾದ ರೀತಿಯಲ್ಲಿ ಅಧ್ಯಯನವನ್ನು ಮಾಡಿದವರಲ್ಲ. ಒಂದಿಬ್ಬರನ್ನು ಬಿಟ್ಟರೆ ಅವರು ಲೌಕಿಕ ಕಾವ್ಯಗಳನ್ನಾಗಲೀ, ಕಾವ್ಯ ಲಕ್ಷಣಗಳನ್ನಾಗಲೀ ಗಮನಿಸಿದವರಲ್ಲ. ಭಕ್ತಿಯ ನೆಲೆಯಲ್ಲಿ ಸೃಷ್ಟಿಯಾದ ಈ ಕೃತಿಗಳಿಗೆ ಅದರ ಅಗತ್ಯವೂ ಇರಲಿಲ್ಲ.

ವಾಸ್ತವದಲ್ಲಿ ದಾಸ ಸಾಹಿತ್ಯವೂ ಜನರ ಮಧ್ಯ, ಜನರಿಂದ, ಜನರ ಮುಂದೆಯೇ ಹುಟ್ಟಿ ಬೆಳೆದ ಸಾಹಿತ್ಯ ಯಾವುದೇ ಒಂದು ಕೇಂದ್ರೀಕೃತ ವ್ಯವಸ್ಥೆಯಲ್ಲಿ ಹುಟ್ಟಿದಲ್ಲ. ಮನೆ ಮನೆ, ಓಣಿ ಓಣಿಗಳಲ್ಲಿ ತಿರುಗಾಡುತ್ತಾ, ಹಾಡುತ್ತ ಕುಣಿಯುತ್ತ ಸಾಗುವಾಗ ಕಂಡ ಲೋಕಾನುಭವಗಳು. ಭಾವತನ್ಮಯತೆಯಲ್ಲಿ ಮೂಡಿಬಂದ ಈ ಕೃತಿಗಳು ಕವಿತೆಯ ಎಲ್ಲ ಕಾವ್ಯಾಂಶಗಳಿಂದ ತುಂಬಿ ನಿಂತುವು. ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯದ ಪ್ರತೀಕವಾದ ಈ ರಚನೆಗಳು ಶುದ್ಧ ಭಾವಗೀತೆಗಳಾಗಿವೆ ಎಂಬುದನ್ನು ನಂತರದ ದಿನಗಳಲ್ಲಿ ವಿದ್ವಾಂಸರು ಗುರುತಿಸಿದ್ದಾರೆ. ೧೯ನೇ ಶತಮಾನದಲ್ಲಿ ಪಾಶ್ಚ್ಯಾತ್ಯ ಮಿಶನರಿಗಳಿಂದ ಕನ್ನಡ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸ ನಡೆಯಿತು. ಕ್ರಿ.ಶ ೧೮೪೮ರಲ್ಲಿ ವೈಗ್ಲೆ ಎಂಬುವವನು ಜರ್ಮನ ಪತ್ರಿಕೆ ಝುಡಡಿಎಮ್‌ಸಿ ಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸಿದನು. ಅದರಲ್ಲಿ ದಾಸ ಸಾಹಿತ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತಾ ‘ಅವುಗಳು ಪರ್ಶಿಯನ್ ಗಜಲ್‌ಗಳಂತೆ ಕೇಳುವುದಕ್ಕೆ ಮೋಹಕವಾಗಿವೆ’ ಎಂದು ಅಭಿಪ್ರಾಯ ಪಟ್ಟಿದ್ದಾನೆ. ಉದಾಹರಣೆಗೆ ಪುರುಂದರದಾಸರ ‘ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ’ ಎಂಬ ಕೀರ್ತನೆಯನ್ನು ಜರ್ಮನ್ ಭಾಷೆಗೆ ಅನುವಾದಿಸಿ ಕೊಟ್ಟಿದ್ದಾನೆ. ಬಹುಶಃ ಕನ್ನಡ ಭಾಷೆಯ ಒಂದು ಕೃತಿ ಪಾಶ್ಚಾತ್ಯ ಭಾಷೆಗೆ ಅನುವಾದಗೊಂಡ ಮೊದಲ ಕೃತಿ ಎಂದು ತೋರುತ್ತದೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ ವರ್ಣಗಳ ಭೆದವಿಲ್ಲದೆ ಜನರಬಾಯಲ್ಲಿ ಉಳಿದುಕೊಂಡು ಬಂದ ದಾಸಸಾಹಿತ್ಯವನ್ನು ಮೊಟ್ಟ ಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶೆನ್ನನಿನ ರೆ. ಹರ್ಮನ್ ಮೊಗ್ಲಿಂಗನಿಗೆ (ಕ್ರಿ ಶ ೧೮೧೮–೧೮೮೧) ಸೇರುತ್ತದೆ. ಅವನು ಕ್ರಿ. ಶ. ೧೮೩೬ ರಿಂದ ತನ್ನ ಇಲ್ಲಿಯ ವಾಸ್ತವ್ಯದಲ್ಲಿ ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದನು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು ‘ದಾಸರ ಪದಗಳು’ ಎಂಬ ಹೆಸರಿನಿಂದ ಕ್ರಿ.ಶ.೧೮೫೦ರಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದನು. ಮುಂದೆ ಎರಡೇ ವರುಷಗಳಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಪ್ರಟಿಸಿದನು. ರೆ. ಹರ್ಮನ್ ಮೊಗ್ಲಿಂಗನು ಅದೇ ದಿನಗಳಲ್ಲಿ ಕನಕ–ಪುರುಂದರದಾಸರ ೨೪ ಕೀರ್ತನೆಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪ್ರಕಟಿಸಿದನು[೨] ಕನ್ನಡ ನಿಘಂಟಿನ ಕಿಟೆಲ್, ಕೀರ್ತನೆಗಳನ್ನು ಅಭ್ಯಾಸ ಮಾಡಿ ‘ಇಂಡಿಯನ್ ಎಂಟಿಕ್ವೆರಿ’ ಪತ್ರಿಕೆಯಲ್ಲಿ ‘ಕರ್ನಾಟಕ ವೈಷ್ಣವ ದಾಸಾಸ’ ಎಂಬ ಹೆಸರಿನ ವಿಮರ್ಶಾತ್ಮಕ ಲೇಖನವನ್ನು ಪ್ರಟಕಿಸಿದನು. ಇದುವೆ ದಾಸಸಾಹಿತ್ಯದ ಮೇಲಿನ ಪ್ರಥಮ ಲೇಖನ ಎನಿಸಿದೆ. ಅನಂತರ ಇಂದಿನವರೆಗೆ ದಾಸಸಾಹಿತ್ಯ ಮತ್ತು ದಾಸರ ಕುರಿತು ಅನೇಕ ಪಿಹೆಚ್.ಡಿ ಪ್ರಬಂಧಗಳು, ಗ್ರಂಥಗಳು, ಲೇಖನಗಳು ಬಂದಿವೆ. ಜೊತೆಗೆ ೧೩೦ ದಾಸರ ೧೬೫೦೦ ಕೀರ್ತನೆಗಳ ಸಂಗ್ರಹ ೫೦ ಸಂಪುಟಗಳಲ್ಲಿ ಬಂದಿವೆ. ಮತ್ತು ಅದರಷ್ಟೇ ಸಂಖ್ಯೆಯ ಕೀರ್ತನೆಗಳು ಪ್ರಕಟನೆಗೆ ಕಾದಿವೆ ಎಂಬುದನ್ನು ಗಮನಿಸಿದರೆ ಅದರ ಅಗಾಧತೆಯ ಅರಿವಾಗುತ್ತದೆ. ದಾಸಸಾಹಿತ್ಯದ ಮುಖ್ಯ ತತ್ವ ಭಕ್ತಿ, ಮೂಲ ಸತ್ಯ ಭಗವಂತ. ದಾಸ ಶಬ್ದ ಹೇಳುವುದೇ ಒಡೆಯ ಮತ್ತು ದಾಸರ ಸಂಬಂಧವನ್ನು. ಒಡೆಯನಿರದಿದ್ದರೆ ದಾಸ ಎಂಬ ಶಬ್ದಕ್ಕೆ ಅರ್ಥವೇ ಇಲ್ಲ. ದಾಸರು ಭಕ್ತಿಯ ದಾರಿಯಲ್ಲಿ ಭಗವಂತನೆಂಬ ಮೂಲ ಸತ್ಯವನ್ನು ಹುಡುಕಲು ಹೊರಟವರು. ಹಾಗೆ ಅವರು ಹೊರಟಾಗ ಭಕ್ತಿಯ ದಾರಿಗೆ ತಮ್ಮನಷ್ಟೇ ತೆರೆದುಕೊಳ್ಳಲಿಲ್ಲ. ಅದನ್ನು ಇಡೀ ಸುಮುದಾಯಕ್ಕೇ ತೆರೆದಿಟ್ಟರು. ಅದುವೆ ಇಲ್ಲಿಯ ವಿಶೇಷ. ಹಾಗೆ ತೆರೆದಿಡುವಾಗ ಬದುಕೆಂದರೇನು? ಹೇಗೆ ಬದುಕಬೇಕು? ಎಂಬುದನ್ನು ತಿಳಿಸುತ್ತ ಹೋದರು.

ಕನ್ನಡ ದಾಸ ಸಾಹಿತ್ಯ ಶ್ರೀ ನರಹರಿತೀರ್ಥರಿಂದ (ಕ್ರಿ.ಶ. ೧೩೨೪–೧೩೩೪) ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ಆದರೆ ಅದು ಖಚಿತ ರೂಪ ಪಡೆದಿದ್ದು, ಶ್ರೀ ಶ್ರೀಪಾದರಾಯರು (ಕ್ರಿ.ಶ. ೧೪೦೬–೧೫೦೪) ಮತ್ತು ಅವರ ಶಿಷ್ಯ ಶ್ರೀ ವ್ಯಾಸರಾಯರಿಂದ (ಕ್ರಿ. ಶ ೧೪೭೬–೧೫೩೯). ಶ್ರೀ ಶ್ರೀಪಾದರಾಯರು ತಮಿಳಿನಾಡಿನ ಶ್ರೀರಂಗದಲ್ಲಿದ್ದವರು. ಅವರ ಆರಾಧ್ಯ ದೈವ ತಮಿಳುನಾಡಿನ ಶರೀರಂಗ. ‘ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ’ ಎಂದು ಹೇಳಿದ್ದು ಶ್ರೀರಂಗದ ರಂಗನಾಥನ ಕುರಿತಾಗಿ. ಅವರ ಅಂಕಿತ ‘ರಂಗವಿಠಲ’. ಆ ವಿಠಲ ಇಂದಿನ ಮಹಾರಾಷ್ಟ್ರದಲ್ಲಿದ್ದವನು. ಮರಾಠಿ ಸಂತ ನಾಮದೇವನು ಹೇಳುವಂತೆ, ವಿಠಲನು, ‘ಕಾನಡಾ ವಿಠಲ ವೋ, ಉಭಾ ಭೀವರೇ ತೀರೀ’. ಅಂದರೆ, ಭೀಮಾತೀರದಲ್ಲಿ ನಿಂತವನು ಕನ್ನ ವಿಠಲ ! ತಮಿಳುನಡಿನ ಶ್ರಿರಂಗದಿಂದ ಮಹಾರಾಷ್ಟ್ರದ ಗಡಿಭಾಗದ ಪಂಡರಪೂರದವರೆಗೂ ಕನ್ನಡದ ವಿಠಲನ ದರಬಾರು!. ಇದು ಕನ್ನಡ ದಾಸಸಾಹಿತ್ಯದ ವಿಸ್ತಾರ. ಭಕ್ತರಿಗೆ ಭಗವಂತನನ್ನು ಹುಡುಕಲು ಭಾಷೆಗಳ, ಪ್ರದೇಶಗಳ ಗಡಿ ಇರಲಿಲ್ಲ. ಇಲ್ಲವೂ ಕೂಡ ಎಂಬುದನ್ನು ಗಮನಿಸಬೇಕು. ಸಂಸ್ಕೃತದ ಘಟಪಟಗಳು ಮಧ್ಯ ಒದ್ದಾಡುತ್ತಿದ್ದ ಪಂಡಿತರ ದೇವರನ್ನು, ಧರ್ಮದ ತಿರುಳನ್ನು ಮನೆ ಮಾತುಗಳಲ್ಲಿ ಹೇಳಿದವರು ದಾಸರು. ‘ಇಟ್ಟಾಂಗೆ ಇರುವೆನೋ ಹರಿಯೇ ಎನ್ನ ಧೋರಿಯೇ’ ಎಂದು ಶ್ರೀಪಾದರಾಯರು ಕನ್ನಡ ಭಾಷೆಯಲ್ಲಿಯೇ ಮೊರೆ ಇಟ್ಟಿದ್ದನ್ನು ಕೇಳಿ ಪಂಡಿತ–ಪಾಮರರಿಬ್ಬರೂ ಅಚ್ಚರಿ ಪಡುವಂತಾಯಿತು. ಪಾಮರರ ಮನ ಮುಟ್ಟಿತು. ಕನ್ನಡ ಭಾಷೆಯಲ್ಲಿ ಹೇಳಿದರೂ ದೇವರು ಕೇಳುತ್ತಾನೆ ಎಂದುಕೊಂಡರು. ಅದು ಹೇಳುವ ಅವರ ಮಾತುಗಳು ಇಂದಿಗೂ, ಎಂದಿಗೂ ಪ್ರಸ್ತುತವಾಗಿವೆ ಎಂಬುದು ಮಹತ್ವದ್ದಾಗಿದೆ. ‘ಸಣ್ಣ ಶಾಲ್ಯೋದನ ಬೆಣ್ಣೆ ಕಾಸಿದ ತುಪ್ಪ / ಚಿನ್ನದ ಹರಿವಾಣದಲ್ಲಿ ಭೋಜನ ಘನ್ನ ಮಹಿಮ ನಿನ್ನ ಕರುಣ ತಪ್ಪದ ಮ್ಯಾಲೆ ಕ/ ದನ್ನ ಕಾಣಿಸದೆ ಬಾಯ್ಬಿಡಿಸುವಿ ಹರಿಯೇ //’ ಎಂಬುದಾಗಿ ಈ ಜಗದಲ್ಲಿಯ ಜೀವನ ಅನಿಶ್ಚತತೆ ಮತ್ತು ಭಗವಂತನ ನಿಯಂತ್ರಣ ಶಕ್ತಿಯನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಅದು ಯಾರ ಮನವನ್ನಾದರೂ, ಯಾವ ಕಾಲದಲ್ಲಾದರೂ ತಟ್ಟುತ್ತದೆ. ಮತ್ತು

ಇದುವೆ ದಾಸ ಸಾಹಿತ್ಯದ ವೈಶಿಷ್ಟ್ಯವೆನಿಸಿದೆ. ಸಾವಿರಕ್ಕೂ ಅಧಿಕ ವರುಷದ ಇತಿಹಾಸವಿರುವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಜೈನ ಯುಗ, ವೀರಶೈವ ಯುಗ ಮತ್ತು ಬ್ರಾಹ್ಮಣ ಯುಗ ಎಂದು ಮೂರು ಭಾಗಗಳನ್ನು ಮಾಡಿ, ಈ ಶೀರ್ಷಿಕೆಗಳು ಆಯಾ ವರ್ಗದ ಸಾಹಿತ್ಯವನ್ನು ಪ್ರತಿನಿಧಿಸುತ್ತವೆ ಎಂದು ಕನ್ನಡ ಸಾಹಿತ್ಯ ಚರಿತ್ರಕಾರರು ಹೇಳಿದರು. ಸಾಹಿತ್ಯದ ಅಭ್ಯಾಸಿಗಳ ಹೊರತು ಪಡಿಸಿ ಈ ಸಾಹಿತ್ಯ, ಆಯಾ ವರ್ಗದ ಅರಮನೆ ಗುರುಮನೆಗಳಿಗೆ ಮಾತ್ರ ಸೀಮಿತವಾದವು.

ಆದರೆ ದಾಸ ಸಾಹಿತ್ಯ ಒಂದು ವರ್ಗಕ್ಕೆ ಸೀಮಿತವಾಗಲಿಲ್ಲ. ಅದು ಎಲ್ಲ ವರ್ಗಗಳ ಅರಮನೆ ಮತ್ತು ಜನ ಸಾಮಾನ್ಯರನ್ನೂ ಮುಟ್ಟಿ, ಎಲ್ಲ ಕಾಲದಲ್ಲಿಯೂ ಸ್ವೀಕೃತವಾಗಿರುವುದು ಅದರ ವಿಶೇಷವಾಗಿದೆ. ಹಿಂದುಳಿದವರು, ದಲಿತರಿಂದ ಹಿಡಿದು ಸಮಾಜದ ಅತ್ಯಂತ ಮುಂದುವರಿದ ಜನರ ಸಮುದಾಯಗಳಲ್ಲಿ, ಮಠ–ಮಾನ್ಯಗಳಲ್ಲಿ, ಗುಡಿ–ಗುಂಡಾರಗಳಲ್ಲಿ ದಾಸ ಸಾಹಿತ್ಯ ಸ್ವೀಕಾರವಾಗಿದೆ. ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ, ದ್ಯಾಮವ್ವ, ದುರ್ಗವ್ವ, ಬೀರಪ್ಪನ ಗುಡಿಗಳ ಭಜನೆಗಳಲ್ಲಿ ಶೈವ, ವೀರಶೈವರ ಭಜನೆಗಳಲ್ಲಿ, ಅತ್ಯಂತ ಮಡಿ ಮಾಡುವ ವೈಷ್ಣವರ ಮಠಗಳಲ್ಲಿ ದಾಸರ ಪದಗಳು ಪ್ರವೇಶ ಪಡೆದಿವೆ. ಅಲ್ಲಿ ದಾಸರ ಜಾತಿ ಮತ ಪಂಥ ಮುಖ್ಯವಾಗಲಿಲ್ಲ. ಕುರುಬರ ಕನಕದಾಸ, ತೀರ ಇತ್ತೀಚಿನ ಮುಸ್ಲಿಮ ಬಡೇಸಾಬ, ರಾಮದಾಸರಾಗಿ ರಚಿಸಿದ ಕೀರ್ತನೆಗಳು ಸ್ವೀಕೃತವಾಗಿವೆ. ಸಾಹಿತ್ಯದ ಬಹು ಮುಖ್ಯ ಉದ್ದೇಶ, ಅದು ಜನರ ಮನಸ್ಸನ್ನು ಮುಟ್ಟಬೇಕು. ತಟ್ಟಬೇಕು. ದಾಸ ಸಾಹಿತ್ಯ ಜನರ ಮನ ಮುಟ್ಟುವಲ್ಲಿ ಯಶಸ್ವಿಯಾಗಿದೆ. ಅವರವರ ಧರ್ಮದ ಅಸ್ತಿತ್ವವನ್ನು, ಅವರವರ ನಂಬುಗೆಗಳನ್ನು, ಶ್ರದ್ಧೆಯನ್ನು ಉಳಿಸಿ ಜನರ ಮನಸ್ಸನ್ನು ಧರ್ಮದಲ್ಲಿ ನಡೆಯುವಂತೆ ಮಾಡಿದ ಬಹುಪಾಲು ಶ್ರೇಯಸ್ಸು ದಾಸ ಸಾಹಿತ್ಯಕ್ಕೆ ಸಲ್ಲುತ್ತದೆ. ವಿಶೇಷವಾಗಿ ಅರ್ಥವಿಲ್ಲದ ಆಚಾರ ವಿಚಾರಗಳನ್ನು, ಅಂಧಾನುಕರಣೆಯನ್ನು ಖಂಡಿಸುತ್ತ ಮುಕ್ತಿಗೆ ಸಾಧನೆಯಾಗಿ, ವಿಶೇಷವಾಗಿ ಸ್ತ್ರೀಯರಿಗೂ, ಹಿಂದುಳಿದ ಸಮುದಯಕ್ಕೂ ಆಧ್ಯಾತ್ಮದ ದಾರಿಯನ್ನು ಒದಗಿಸಿ ಕೊಡುವಲ್ಲಿ ಮುಂದಾದದ್ದು ದಾಸ ಸಾಹಿತ್ಯದ ಅದ್ಭುತ ಸಾಧನೆಯಾಗಿದೆ.

ಕನ್ನಡದಲ್ಲಿ ದಾಸ ಸಾಹಿತ್ಯವನ್ನು ರಚಿಸಿದ ಮೊದಲ ಮೂವರು, ಅಗ್ರಗಣ್ಯರಾದ ಶ್ರೀ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಮತ್ತು ಶ್ರೀ ವಾದಿರಾಜರು, ಬ್ರಾಹ್ಮಣರ ಮಠಗಲ ಪೀಠಾಧಿಪತಿಗಳಾಗಿದ್ದವರು. ಸಂಸ್ಕೃತದಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿದವರು, ಸಿದ್ಧಾಂತದ ಖಂಡನೆ, ಮಂಡನೆಗಳಲ್ಲಿ ಉದ್ದಾಮ ಗ್ರಂಥಗಳನ್ನು ರಚಿಸಿದರು. ಅಂಥವರು ಪಾಂಡಿತ್ಯಕ್ಕಿಂತ ಪರಮಾತ್ಮನ ಹತ್ತಿರ ಹೋಗುವುದು ದೊಡ್ಡ ಸಾಧನೆ ಎಂದರು. ಅದು ಭಗವಂತನಲ್ಲಿಯ ಅನನ್ಯ ಭಕ್ತಿ ಮತ್ತು ಆತನಿಗೆ ಶರಣಾಗುವುದರಿಂದ ಮಾತ್ರ ಸಾಧ್ಯ ಎಂದು ತಿಳಿದರು. ತಮಗೆ ತಿಳಿದಿದ್ದನ್ನು ಸರಳ ಆಡುಮಾತಿನಲ್ಲಿ ಹೇಳಿದರು. ಮನುಷ್ಯ ಜನ್ಮದ ಸಾರ್ಥಕತೆಯನ್ನು ಪಡೆಯಲು ತಾವು ಕಂಡ ದಾರಿಯನ್ನು ಜನ ಸಾಮಾನ್ಯರಿಗೆ ತೆರದು ಇಟ್ಟರು. ಅಲ್ಲಿ ಮಡಿ, ಮೈಲಿಗೆ, ಜಾತಿ, ಕುಲ, ಲಿಂಗಗಳ ಭೇಧವಿರಲಿಲ್ಲ.

## ದಾಸರು ಪಡೆದ ದೀಕ್ಷೆ

ಶ್ರೀವೈಷ್ಣವರ ವೈಕುಂಠದಾಸರು, ಸ್ಮಾರ್ತರಾದ ನಾರಾಯಣ ಯತಿಗಳು, ಕುರುಬ ಕನಕದಾಸರು, ಮತ್ತು ಪುರುಂದರದಾಸರು ವ್ಯಾಸರಾಯರಿಂದ ದೀಕ್ಷೆ ಪಡೆದರು ಎಂದು ಹೇಳಲಾಗುತ್ತದೆ. ಆದರೆ ಇವರೆಲ್ಲ ವ್ಯಾಸರಾಯರನ್ನು ಕಾಣುವ ಹೊತ್ತಿಗೆ ದಾಸರಾಗಿಬಿಟ್ಟಿದ್ದರು ಎಂಬುದನ್ನು ಗಮನಿಸಬೇಕು. ಕನಕದಾಸರು ಯುದ್ಧದಲ್ಲಿ ಗಾಯಾಳುವಾಗಿ ಬಿದ್ದು, ಸತ್ತೇ ಹೋಗುತ್ತೇನೆ ಎಂಬ ಸಂದರ್ಭದಲ್ಲಿ ಪರಮಾತ್ಮನ ಅನುಗ್ರಹದಿಂದ ದಾಸರಾಗಿ ಎದ್ದು ತಾಳ ತಂಬೂರಿಗಳನ್ನು ಹಿಡಿದುಕೊಂಡು ವಿಜಯನಗರಕ್ಕೆ ಬಂದವರು. ಹೆಂಡತಿಯ ಮೂಗುತಿಯ ಪ್ರಸಂಗದಿಂದ ಮನೆ, ಧನ, ಕನಕಗಳ ಮೇಲೆ ತುಳಸಿ ಪತ್ರಿಯನ್ನು ಇಟ್ಟು ದಂಡಿಗೆ, ಬೆತ್ತ, ಗೋಪಾಳಬುಟ್ಟಿಯನ್ನು ಹಿಡಿದುಕೊಂಡು ಪುರಂದರದಾಸರು ವ್ಯಾಸರಾಯರ ಹತ್ತಿರ ಬಂದಿದ್ದು ಕ್ರಿ. ಶ. ಸುಮಾರು ೧೫೨೪ ರಲ್ಲಿ ಆಗ ಅವರಿಗೆ ೪೦ರ ಪ್ರಾಯ. ವ್ಯಾಸರಾಯರಿಗೆ ಆಗ ಸುಮಾರು ೭೭ ವಯಸ್ಸು. ವ್ಯಾಸರಾಯರರು ತಮ್ಮ ಶಿಷ್ಯರಾದ ಪುರಂದರ, ಕನಕರಿಂದ ಭಗವಂತನನ್ನು ಕಾಣುವ ಉಪಾಸನಾ ರಹಸ್ಯವನ್ನು ಕಂಡುಕೊಂಡು ಪರಿವರ್ತನೆಯಾದದ್ದನ್ನು ತಮ್ಮ ಸುಳಾದಿಯೊಂದರಲ್ಲಿ ಹೀಗೆ ಹೇಳಿದ್ದಾರೆ. 'ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ, ತನ್ನ ಕಂಠಮಣಿಯ ತಾ ಮರೆತಂತೆ, ಕಣ್ದೆರೆಯದ ಹಸುಳೆ ತಾಯನರಿಯದಂತೆ, ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ, ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ'. ಇನ್ನೊಂದು ಕೀರ್ತನೆಯಲ್ಲಿ 'ಹರಿದಾಸರ ಸಂಗಕೆ ಸರಿಯುಂಟೆ' ಎಂದು ಕೇಳಿದರೆ, ಮತ್ತೊಂದರಲ್ಲಿ 'ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡ' ಎಂದರು. ಬಂಗಾರದ, ನವರತ್ನಖಚಿತ ಮಂಟಪದಲ್ಲಿ, ದೇವತಾ ಮೂರ್ತಿಗಳಿದ್ದರೂ, 'ಎನ್ನ ಬಿಂಬ ಮೂರುತಿಯನು ಪೂಜಿಸುವೆ ಮನ ಮುಟ್ಟಿ' ಎಂದು ಹೇಳಿದರು. ಇವುಗಳನ್ನೆಲ್ಲ ಕೇಳಿದರೆ, ಯಾರು ಯಾರಿಂದ ದೀಕ್ಷೆ ಪಡೆದರು ಎಂಬುದು ಗೊತ್ತಾಗುತ್ತದೆ.

## ದಾಸರು ತೋರಿದ ಭಕ್ತಿ

'ಭಕ್ತಿ ಬೇಕು, ವಿರಕ್ತಿ ಬೇಕು, ಸರ್ವ ಶಕ್ತಿ ಬೇಕು ಮುಂದೆ ಮುಕ್ತಿ ಬಯಸುವವಗೆ' ಎಂದು ಶ್ರೀ ಶ್ರೀಪಾದರಾಯರು ಅತ್ಯಂತ ಸರಳ ಭಾಷೆಯಲ್ಲಿ ಹೇಳಿದರು. ಭಗವಂತನಲ್ಲಿ ಕೇಳಿಕೊಳ್ಳುವಾಗಲೂ ಕೂಡ, ಗ್ರಾಸ ವಾಸಗಳಿಗೆ ಇಲ್ಲವೆಂದು ನಿನ್ನ ಬೇಸರಿಸಿ ಬೇಡ ಬಂದುದಿಲ್ಲ ವಾಸುದೇವನೇ ನಿನ್ನ ದಾಸರ ದಾಸರ ದಾಸರ ದಾಸ್ಯವನು ಕೊಡು,' ಎಂದು ಶ್ರೀರಂಗವಿಠಲನನ್ನು ಕೇಳಿಕೊಂಡಿದ್ದಾರೆ. ಶ್ರೀ ವ್ಯಾಸರಾಯರ ಸಮಕಾಲೀನರು, ಶ್ರೀ ವಾದಿರಾಜರು (ಕ್ರಿ.ಶ. ೧೪೮೦–೧೬೦೦) 'ಹಣವೇ ನಿನ್ನಯ ಗುಣವೇನು ಬಣ್ಣಿಪೆನು, ಹಣವಿಲ್ಲದವನೊಬ್ಬ ಹೆಣವೇ ಸರಿಕಂಡ್ಯಾ,' ಎಂದು ಅಂದೇ ಹೇಳಿದ್ದಾರೆ. 'ಅರಿಯದ ಶುಂಠನ ಅರಿತವನೆನಿಸುವಿ, ಸಿರಿ ಹಯವದನ ಸ್ಮರಣೆಯ ಮರೆಸುವಿ' ಎನ್ನುತ್ತಾರೆ. ಇಂದು ಕೂಡ ಸತ್ಯ ! ಅವರು ಕನಕದಾಸರ ಅತ್ಯಂತ ಪರಮ ಸ್ನೇಹಿತರು ಎಂಬುದು ಉಭಯತರ ಚರಿತ್ರೆಗಳಲ್ಲಿ ಪ್ರಸಿದ್ಧವಾಗಿದೆ. ಇವರು ಕಟ್ಟಿದ ದಾಸಸಾಹಿತ್ಯ ಮಂದಿರಕ್ಕೆ ಶಿಖರವನ್ನಿಟ್ಟವರು ಪುರಂದರ ಮತ್ತು ಕನಕದಾಸರು.

ಪುರುಂದರದಾಸರು (ಕ್ರಿ.ಶ.೧೪೮೦–೧೫೬೫) ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು, ಬಗಲಿಗೆ ಗೋಪಾಳಬುಟ್ಟಿಯನ್ನು ತೂಗು ಹಾಕಿಕೊಂಡು ಚಿಟಿಕೆ ಬಾರಿಸುತ್ತ, 'ಮಧುಕರ ವೃತ್ತಿ ಎನ್ನದು, ಅದು ಬಲು ಚೆನ್ನದು, ಪದುಭನಾಮನ ಪಾದಪದುದು ಮಧುಪವೆಂಬ,' ಎನ್ನುತ್ತ ಬೀದಿಯಲ್ಲಿ ಇಳಿದರು. ಅವರ ಜೀವದ ಗೆಳೆಯ ಕನಕದಾಸರು (ಕ್ರಿ.ಶ.೧೪೯೫–೧೫೯೩) 'ಕುಲ ಕುಲವೆಂದು ಹೊಡದಾಡದಿರಿ ನಿಮ್ಮ ಕುಲದ ನೆಲೆಯನೇನಾನದರೂ ಬಲ್ಲಿರಾ' ಎಂದು ಕೇಳಿದರು. ಅವರಿಗೆ ಪರಸ್ಪರ ತಾವು ಯಾವ ಜಾತಿಯವರು ಎಂಬುದು ಮುಖ್ಯವಾಗಿರಲಿಲ್ಲ. 'ಆವ ಕುಲವಾದರೇನು ಆವನಾದರೇನು ಆತ್ಮ ಭಾವವರಿತ ಮೇಲೆ' ಎಂದರು. ಇಷ್ಟಾಗಿಯೂ ಅವರನ್ನು ಕಂಡು ಮೂಗು ಮುರಿದವರಿಗೆ ತಮ್ಮ ಕೀರ್ತನೆಗಳಿಂದಲೇ ಮಾರ್ಮಿಕ ಉತ್ತರವನ್ನು ಕೊಟ್ಟಿರುವುದನ್ನು ಗಮನಿಸಬೇಕು. ಅಂತೆಯೇ

ಅವರು ನಡೆಸುತ್ತಿದ್ದ ವಿರಕ್ತ ಜೀವನವು ಜನರಿಗೆ ಆದರ್ಶವಾಗಿತ್ತು. ಸಂಗ್ರಹ ಬುದ್ಧಿಯನ್ನು ತೊರೆದು ಭಗವಂತನ ನಾಮ ಸಂಕೀರ್ತನೆಯನ್ನು ಮಾಡುತ್ತ ವೈರಾಗ್ಯದ ಕಡೆಗೆ ಪಯಣಿಸಿದರು. ವೈರಾಗ್ಯವೆಂದಾಕ್ಷಣ ಈ ಜಗತ್ತು ಕ್ಷಣಭಂಗುರ, ಎಲ್ಲವೂ ಮಿಥ್ಯೆ, ಮಾಯೆ ಎನ್ನುತ್ತ ಜೀವನದಿಂದ ವಿಮುಖರಾಗಲಿಲ್ಲ. ಈ ಜೀವನ ಅನಿತ್ಯ, ಅಶಾಶ್ವತ ಎಂಬುದು ಗೊತ್ತಿದ್ದರೂ, ಸಂಸಾರವೆಂಬಂಥ ಭಾಗ್ಯವಿರಲಿ ಕಂಸಾರಿಯನು ನೆನೆವಂಥ ಸೌಭಾಗ್ಯವಿರಲಿ' ಎಂದು ಹೇಳುತ್ತ, 'ಈಸಬೇಕು, ಇದ್ದು ಜಯಿಸಬೇಕು,' ಎಂದು ವೃತ್ತಿ ಜೀವನಕ್ಕೆ ಪ್ರಚೋದನೆ ನೀಡಿದರು. ಅದು ಒಂದು ರೀತಿಯಲ್ಲಿ, 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದಂತೆ ಕಾಣಿರೋ', ಎಂದು ಸ್ಪಷ್ಟಪಡಿಸಿದರು. ಬಂದದ್ದೆಲ್ಲ ಬರಲಿ, ಗೋವಿಂದನ ದಯವಿರಲಿ' ಎಂಬುದು ಅವರ ನಿಲುವಾಗಿತ್ತು. ಇಂತಹ ನಿಲುವು ಒಂದು ರೀತಿಯ ಜನತಾ ಶಿಕ್ಷಣವಾಗಿತ್ತು. ಅದಕ್ಕೆ ಯಾರ ಒಪ್ಪಿಗೆ, ಮೆಚ್ಚುಗೆ, ಭಯ, ಮುತುವರ್ಜಿಗಳಿರಲಿಲ್ಲ. ಸರಕಾರ ಸಂಘಟನೆಗಳಿಲ್ಲದೆ ಸ್ವ ಇಚ್ಚೆಯಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡಿದರು. ಮಡಿವಂತರಾದ ಕೆಲವು ಪಂಡಿತರನ್ನೂ ಎದುರು ಹಾಕಿಕೊಳ್ಳಲು ಅಂಜುವುದಿಲ್ಲ 'ಪಿಂಡಾಂಡದೊಳಗಿನ ಗಂಡನ ಕಾಣದೆ ಮಂಡೆಯರಾದರು ಪಂಡಿತರೆಲ್ಲ' ಎಂದು ಪುರಂದರದಾಸರು ಕೇಳಿದರೆ, ಕನಕದಾಸರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಪಟ್ಟೆ ನಾಮವ ಬಳಿದು ಪಾತ್ರೆ ಕೈಯಲಿ ಹಿಡಿದು ಗುಟ್ಟಿನಲಿ ಜಪಿಸುವ ಗುರುತನರಿಯದೆ, ಕೆಟ್ಟ ಕೂಗನು ಕೂಗಿ ಹೊಟ್ಟೆಯನು ಹೊರೆಯಂಥ ಹೊಟ್ಟೆ ಗುಡುಮಗಳೆಲ್ಲ ಪರಮವೈಷ್ಣವರೆ? ಎಂದು ವೈಷ್ಣವರನ್ನು ಕೇಳಿದರು. ಅವರು ಮುಸ್ಲೀಮರನ್ನೂ ಬಿಟ್ಟಿಲ್ಲ.

ಕ್ರಿ.ಶ. ೧೫೬೫ ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನದೊಂದಿಗೆ ಹರಿಗಡಿದ ದಾಸ ಸಾಹಿತ್ಯವನ್ನು ಮುಂದುವರಿಸಿದವರು ವಿಜಯಪುರ ಪರಿಸರದ ಕಾಖಂಡಕಿ ಮಹಿಪತಿದಾಸರು, ಮತ್ತು ಅವರ ಮಗ ಕೃಷ್ಣದಾಸರು ಮತ್ತು ಬಾಗಲಕೋಟೆಯ ಪ್ರಸನ್ನವೆಂಕಟದಾಸರು. ಮಹೀಪತಿದಾಸರ (ಕ್ರಿ.ಶ. ೧೬೪೦–೧೭೧೦) ಹೊತ್ತಿಗೆ ದಕ್ಷಿಣ ಭಾರತದಲ್ಲಿ ಸಂಪೂರ್ಣ ಮುಸ್ಲೀಮರ ಆಡಳಿತವಿತ್ತು. ಅಂತೆಯೇ, ಮಿಶ್ರ ಭಾಷೆಯ ಒಂದು ಕೃತಿಯಲ್ಲಿ, 'ಸಮಜೋ ಭಾಯೀ ಸಕುನಾ ಚಾರೋ ಖುದಾಕಾ, ತೆಲುಗು, ಕನ್ನಡ, ತುರುಕಾರೆ ಒಂದೇ ಸುಖ' ಎಂದರು. ಯಾವ ಧರ್ಮ, ಯಾವ ಭಾಷೆ ಆದರೇನು ದೇವರು ಕೊಡುವ ಸುಖ ಒಂದೇ ಆಗಿದೆ. ಅವರೆ ಮುಂದುವರಿದು, 'ಮೂರುವರಿ ಮೊಳ ದೇಹದ ಶುದ್ಧಿ ನಿನಗಿಲ್ಲ, ತರ್ಕಸ್ಯಾಡುವರೆ ಸೊಲ್ಲ. ಚಿತ್ತ ಶುದ್ಧಾಗಿ ಮಹೀಪತಿಯ ಮುಟ್ಟು' ಎಂದರು. 'ಯೋಗವೆಂದರೆ ದಾವುದು ಮಾನಿಷಗೆ?' ಎಂದು ಬಾಗಲಕೋಟೆಯ ಪ್ರಸನ್ನವೆಂಕಟದಾಸರು ಕೇಳಿದರು. ಮುಂದುವರೆದು 'ಹಾಸ್ಯ ವದನೆಯರ ಲೇಶ ಹಾರೈಸದೆ, ದಾಸಾಗಿ ಹರಿಯ ಸದಾಧ್ಯಾಸವೆ ಮಹಾಯೋಗ, ಭೋಗ ಬಯಸದೆ ತಾನಾಗಿ ಬಂದುದನುಂಡು, ಲೋಗರ ಹಣ ಹೆಣ್ಣಿನ ತ್ಯಾಗವೇ ಮಹಾಯೋಗ' ಎಂದು ಹೇಳಿದರು.

ದಕ್ಷಿಣ ಭಾರತದಲ್ಲಿ ಮುಸ್ಲೀಮ ಅರಸೊತ್ತಿಗೆಗಳು ಅಂತ್ಯವಾಗಿ (ಕಿ.ಶ.೧೬೮೬–೮೭), ಈ ಪ್ರದೇಶವೆಲ್ಲ ದೆಹಲಿಯ ಆಡಳಿತಕ್ಕೆ ಒಳಪಟ್ಟಿತು. ಇಲ್ಲಿ ಅರಾಜಕತೆ ಬಿಟ್ಟು ಬೇರೆನೂ ಉಳಿದಿರಲಿಲ್ಲ. ಅಂಥ ಸಂದರ್ಭದಲ್ಲಿ ಸಮಾಜದ ಸ್ವಾಸ್ಥ್ಯ ಕಾಪಾಡಲು, ನಿಂತು ಹೋಗಿದ್ದ ದಾಸಸಾಹಿತ್ಯಕ್ಕೆ ಮತ್ತೆ ಚಾಲನೆ ಕೊಟ್ಟವರು ವಿಜಯದಾಸರು. ಅವರ ಪ್ರಭಾವಲಯದಲ್ಲಿ ಬೆಳೆದ ಗೋಪಾಲದಾಸರು, ಜಗನ್ನಾಥದಾಸರೇ ಮೊದಲಾದ ಹರಿದಾಸರಿಂದ ಅಪರೂಪದ ಸಾಹಿತ್ಯ ನಿರ್ಮಾಣವಾಗಿದೆ. ಅದು ೨೦ನೆಯ ಶತಮಾನದ ಮಧ್ಯಕಾಲದ ಶಾಮಸುಂದರವಿಠಲರ ವರೆಗೆ ಅವಿಚ್ಛಿನ್ನವಾಗಿ ಹರಿದು ಬಂದಿತು. ಆದರೂ ದಾಸ ಸಾಹಿತ್ಯವನ್ನು ಒಂದು ಮತಕ್ಕೆ ಅಂಟಿಸಿ, ಅದನ್ನು ಬ್ರಾಹ್ಮಣ ಸಾಹಿತ್ಯ, ಮಾಧ್ವ ಸಾಹಿತ್ಯ, ಮತೀಯ ಸಾಹಿತ್ಯ ಎಂದು ಹೇಳಲಾಗುತ್ತಿದೆ. ಆದರೂ ದಾಸಸಾಹಿತ್ಯದ ವಿಷಯದಲ್ಲಿ ಈ ಮಾತು ಸಂಪೂರ್ಣವಾಗಿ ಅನ್ವಯಿಸುವುದಿಲ್ಲ. ಮತವಿರಲಿ ಬಿಡಲಿ, ಅದನ್ನು ಮೀರಿದ ತತ್ವ ಮತ್ತು ಸಾಹಿತ್ಯವುಳ್ಳ ಭಾಗ ಎಲ್ಲ ಕನ್ನಡ ಜನದ ಅಂತಃಕರಣವನ್ನು ಹೊಕ್ಕುನಿಂತಿದೆ.[೩] ದಾಸಕೂಟದ ನೋಟ ವಿಶಾಲವಾದುದು. ಪ್ರಾರಂಭಕಾಲದ ಶ್ರೀ ವ್ಯಾಸರಾಯರು ಕುರುಬ ಕನಕದಾಸರ ಮೇಲೆ ಪ್ರೀತಿ ಮಾಡಿದುದನ್ನು ಎಲ್ಲರೂ ಬಲ್ಲರು. ಹಂಪಿಯಲ್ಲಿದ್ದ ರಾಮಾವಧೂತರಿಂದ ಮುಸ್ಲಿಮ ಧರ್ಮದ, ಪಿಂಜಾರ ಶೇಖ ಬಡೇಸಾಬ (೧೮೮೨–೧೯೪೦)ರು ರಾಮದಾಸರಾದರು; ಶ್ರೀರಾಮ ಎಂಬ ಅಂಕಿತದಿಂದ ೭೭೦ ಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳೆಲ್ಲವೂ ಪ್ರಕಟವಾಗಿವೆ. 'ರಾಮದಾಸರ ಕೀರ್ತನೆಗಳು, ದಾಸಸಾಸಹಿತ್ಯಕ್ಕೆ ಕೇವಲ ವೈದಿಕರದು ಎಂಬ ಅಪಾದನೆಯನ್ನು ಅಳಿಸಿ ಹಾಕಿದೆ'[೪] ರಾಮದಾಸರು ತಮ್ಮ ಒಂದು ಕೀರ್ತನೆಯಲ್ಲಿ, 'ಕುಲವಂತನೇ ನೀನು ಎಲೋ ಪರಮಾನಂದ, ಕುಲಹೀನನೇ ನಾನು ಪೇಳೆಲವೋ ಸ್ವಾಮಿ' ಎಂದು ಭಗವಂತನನ್ನೇ ಕೇಳಿದ್ದಾರೆ.

ದಾಸರ ಮಧ್ವರ ತತ್ವಗಳಲ್ಲಿ ಅಚಲವಾದ ನಂಬುಗೆಯನ್ನು ಇಟ್ಟವರು ನಿಜ. ಆದರೆ ದಾಸರಿಗೆ ಮಧ್ವರ ಸಿದ್ಧಾಂತದ ಹಿನ್ನಲೆಯಲ್ಲಿ ಅವರು ಹೇಳಿದ ಸಾಧನೆ ಬಹುಮುಖ್ಯವಾಯಿತು. ಸಾಧನೆ ಎಂದರೆ ಭಗವತ್ತತ್ವ, ಸಾಕ್ಷಾತ್ಕಾರ, ಭಕ್ತಿ ಇವುಗಳಿಗೆ ಮಧ್ವ ಸಿದ್ಧಾಂತದ ತತ್ವಗಳು ಅವರಿಗೆ ಊರುಗೋಲಾದವು. ಅಂದ ಮಾತ್ರಕ್ಕೆ ದಾಸರೆಲ್ಲ ಕೇವಲ ಮಧ್ವ ಸಂಪ್ರದಾಯದ ಪ್ರಚಾರಕರು ಎಂದು ಗುರುತಿಸಿದರೆ ತಪ್ಪಾಗುತ್ತದೆ. ಅವರು ಏರಿದ ಎತ್ತರವನ್ನು ಗುರುತಿಸದಂತೆ ಆಗುವುದಿಲ್ಲ. ಅಂತರಂಗದಲ್ಲಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ, ಅಪರೋಕ್ಷಜ್ಞಾನಿಗಳೆನಿಸಿದ, ವಿಶ್ವದ ಎಲ್ಲ ಅನುಭಾವಿಗಳಿಗೆ ಸಮಾನವಾದ ಗುಣವನ್ನು ದಾಸರಲ್ಲಿ ಗುರುತಿಸಬೇಕು. ದಾಸರು 'ಮಾಧ್ವ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ,' ಎಂದು ಹೇಳಲಿಲ್ಲ. ಅವರು ಹೇಳಿದ್ದು 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ,' ಎಂದರು. ಇ ನಿಟ್ಟಿನಲ್ಲಿ 'ವಿಷಯ, ರೂಪ, ಭಾಷೆಗಳಲ್ಲಿ ದಾಸಸಾಹಿತ್ಯ ವಿಶಿಷ್ಟಕಾಂತಿಯುಳ್ಳದಾಗಿ ಕನ್ನಡಿಗರ ಚಿರಸ್ಥಾಯಿಯಾದ ಸೊತ್ತಾಗಿದೆ. ಜನಕ್ಕೆ ಅದು ಹತ್ತಿರ ಬಂದಂತೆ ಜನವೂ ಅದರ ಹತ್ತಿರ ಹೋಗಿ ಸಂಸ್ಕೃತಿ ಸಂವರ್ಧನ ಕಾರ್ಯದಲ್ಲಿ ಅದರಿಂದ ಸ್ಫೂರ್ತಿಪಡೆಯಬೇಕು[೫] ಹೀಗಾದಾಗ ಮಾತ್ರ ದಾಸಸಾಹಿತ್ಯ ಚಲನಶೀಲವಾಗುತ್ತದೆ.

**ಸಮಾರೋಪ**

ದಾಸರು, ಜನಾರ್ಧನನ ಸೇವೆಯನ್ನು, ಜನತೆಯ ಸೇವೆಯ ಮೂಲಕ ಸಲ್ಲಿಸಿದ್ದಾರೆ. ಜನರಲ್ಲಿ, ಧರ್ಮ ಜಾಗೃತಿಯನ್ನುಂಟು ಮಾಡಿದ್ದಾರೆ. ಭಗವದ್ಭಕ್ತಿ ಮೂಡುವಂತೆ ಪ್ರಯತ್ನಿಸಿದ್ದಾರೆ. ಸಂಗೀತದ, ಸಾಹಿತ್ಯದ ಅಭಿರುಚಿಯನ್ನು ಹುಟ್ಟಿಸಿದ್ದಾರೆ. ಯಾವ ಭೇದ ಭಾವಗಳಿಲ್ಲದೆ ಜನರ ಮಧ್ಯದಲ್ಲಿ ಓಡಾಡಿ ಎಲ್ಲರನ್ನೂ, ವಿಶೇಷವಾಗಿ ಮಹಿಳೆಯರನ್ನು, ಹಿಂದುಳಿದವರನ್ನು ಸುಸಂಸ್ಕೃತರನ್ನಾಗಿ ಮಾಡುವಲ್ಲಿ, ತಮ್ಮ ಉದಾತ್ತ ಪ್ರಯತ್ನವನ್ನು ನಿಸ್ವಾರ್ಥತೆಯಿಂದ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯ ರಕ್ಷಣೆ ಪೋಷಣೆಗಳಿಗೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯವಾಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ, ಸಂಗೀತಕ್ಕೆ ಅಮೂಲ್ಯ ಕೊಡುಗೆಯನ್ನು ಕೊಟ್ಟಿದ್ದಾರೆ.

**ಟಿಪ್ಪಣಿಗಳು**

೧. ಮಾಸ್ತಿ ವೆಂಕಟೇಶ ಅಯ್ಯಂಗಾರ, : ವಿಮರ್ಶೆ ೧ – ಪುಟ ೨೯
೨. ಡಾ. ಶ್ರೀನಿವಾಸ ಹವನೂರ, : ಸಂಕಥನ – ಪುಟ ೬೩೩–೬೩೪
೩. ಡಾ. ರಂ. ಶ್ರೀ ಮುಗಳಿ, : ಕನ್ನಡ ಸಾಹಿತ್ಯ ಚರಿತ್ರೆ (೧೯೯೩) – ೩೧೫
೪. ಡಾ. ಚೆನ್ನಣ್ಣ ವಾಲೀಕಾರ, (ಮುನ್ನುಡಿ): ಶ್ರೀ ರಾಮದಾಸರ ಬದುಕು ಮತ್ತು ಸಾಹಿತ್ಯ (೨೦೧೨)
೫. ಡಾ. ರಂ. ಶ್ರೀ ಮುಗಳಿ, : ಕನ್ನಡ ಸಾಹಿತ್ಯ ಚರಿತ್ರೆ (೧೯೯೩) – ೩೧೫